Vijay Karnataka. Date: 21 May 2015

# ಟ್ರೊಯಿಕಾ ಸಂಸ್ಥೆಗೆ ಪ್ರಶಸ್ತಿ

ಕೇಂದ್ರ ವಿಜ್ಞಾನ ಮತ್ತು ತಾಂತ್ರಿಕ ಇಲಾಖೆಯ ತಾಂತ್ರಿಕ ಅಭಿವೃದ್ಧಿ ಮಂಡಳಿ ವತಿಯಿಂದ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಅಹಮದಾಬಾದ್ ಮೂಲದ ಟ್ರೊಯಿಕಾ ಫಾರ್ಮಸುಟಿಕಲ್ಸ್ ಲಿಮಿಟೆಡ್ ಸಂಸ್ಥೆ ಭಾಜನವಾಗಿದೆ. ದೇಶೀಯ ಔಷಧ ಉತ್ಪನ್ನ ಡೈನಪರ್ (ನೋವು ನಿವಾರಕ ಔಷಧ) ತಯಾರಿಕೆ ಮತ್ತು ಮಾರಾಟದಲ್ಲಿ ಯಶಸ್ಸು ಸಾಧಿಸಿರುವ ಹಿನ್ನೆಲೆಯಲ್ಲಿ ಟ್ರೊಯಿಕಾ ಸಂಸ್ಥೆಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮೇ 10ರಂದು ಹೊಸದಿಲ್ಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹರ್ಷವರ್ಧನ್ ಅವರು ಟ್ರೊಯಿಕಾ ಸಂಸ್ಥೆ ಸಿಎಂಡಿ ಕೇತನ್ ಆರ್. ಪಟೇಲ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು ಎಂದು ಪ್ರಕಟಣೆ ತಿಳಿಸಿದೆ.